ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 274/2024 ಪಿಡಬ್ಲ್ಯೂ-1

ದಿನಾಂಕಃ-28-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ. ವಕೀಲರಿಂದಃ-**

ನಾನು ಪ್ರಥಮ ಬಿಎಸ್ ಸಿ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಕುಟುಂಬದಲ್ಲಿ ನಾನು ಮತ್ತು ನನ್ನ ಹೆಂಡತಿ ಮಾತ್ರ ಇದ್ದೇವೆ. ನಮ್ಮ ಕುಟುಂಬದ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನನಗೆ ಒಟ್ಟು 12 ಎಕರೆ ಜಮೀನು ಇದೆ. ಅವುಗಳ ಆರ್ ಟಿಸಿ ಯನ್ನು ಕೊಡಲು ನನಗೆ ತೊಂದರೆ ಇಲ್ಲ. ಸದರಿ ಜಮೀನಿನಲ್ಲಿ ಕಬ್ಬು, ರಾಗಿ, ಭತ್ತ ಬೆಳೆಯುತ್ತೇನೆ, ತೆಂಗಿನ ಮರಗಳು ಸಹ ಇದೆ. ನಾನು ಹಾಲೆ ಮನೆಗೆ ಕಬ್ಬುನ್ನು ಕೊಡುತ್ತೇನೆ. ನನಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನನಗೆ ಬ್ಯಾಂಕ್ ನಲ್ಲಿ ಹಣ ಇಡುವ ಅಭ್ಯಾಸ ಇಲ್ಲ. ನನಗೆ ವರ್ಷಕ್ಕೆ 5 ಲಕ್ಷ ಆದಾಯ ಇದೆ. ನನ್ನ ಕುಟುಂಬಕ್ಕೆ ವರ್ಷಕ್ಕೆ 1 ಲಕ್ಷ ಖರ್ಚಾಗುತ್ತದೆ. ಆರೋಪಿ ನನಗೆ 10-12 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿಯ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯ ತಂದೆಯ ಪರಿಚಯವಿದೆ. ಆರೋಪಿ ಲಾರಿಯ ಚಾಲಕ ಮತ್ತು ಮಾಲೀಕನಾಗಿರುತ್ತಾರೆ. ಆರೋಪಿಯ ಕುಟುಂಬದ ವ್ಯವಹಾರವನ್ನು ಆರೋಪಿಯೇ ನೋಡಿಕೊಳ್ಳುತ್ತಾರೆ. ಆರೋಪಿಯ ಅಣ್ಣನೇ ಮನೆಯ ಯಜಮಾನಿಕೆ ಮಾಡುತ್ತಾರೆಂದರೆ ಸರಿಯಲ್ಲ.

ಆರೋಪಿಗೆ ಲಾರಿ ವ್ಯವಹಾರ ಬಿಟ್ಟು ವ್ಯವಸಾಯದ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಲಾರಿಯಿಂದ ಮಾತ್ರ ಆದಾಯ ಬರುತ್ತದೆ. ಆರೋಪಿಗೆ ಸಾಕಷ್ಟು ಆದಾಯವಿರುವುದರಿಂದ ಸಾಲ ಮಾಡುವ ದರದ್ದು ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಬಿಟ್ಟು ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ಆರೋಪಿಯನ್ನು ಸಾಲದ ಹಣ ವಾಪಸ್ಸು ಕೊಡುವಂತೆ ಕೇಳಿದಾಗ ಚೆಕ್ ನ್ನು ಕೊಟ್ಟಿರುತ್ತಾರೆ. ಸಾಲ ನೀಡಿದ ದಿನವೇ ಭದ್ರತೆಗಾಗಿ ಚೆಕ್ ಮತ್ತು ಆನ್ ಡಿಮ್ಯಾಂಡ್ ಪ್ರನೋಟ್ ಪಡೆಯುತ್ತಾರೆಂದರೆ ನನಗೆ ಗೊತ್ತಿಲ್ಲ. ಸಾಲ ಕೊಟ್ಟ ದಿನವೇ ದಾಖಲೆ ಪಡೆಯಲು ತೊಂದರೆ ಇಲ್ಲ. ಆರೋಪಿಗೆ ಸಾಲವನ್ನು ನಮ್ಮ ಮನೆಯಲ್ಲಿಯೇ ಕೊಟ್ಟಿರುತ್ತೇನೆ. ಆರೋಪಿ ಒಬ್ಬರೇ ಆ ದಿನ ಬಂದಿದ್ದರು. ಆರೋಪಿ ಕೈ ಸಾಲ ತೀರಿಸಲು ನನ್ನ ಬಳಿ ಸಾಲ ಕೇಳಿರುತ್ತಾರೆ. ನಾನು ಹಣ ಕೊಡುವ 1 ವಾರದ ಹಿಂದೆ ಆರೋಪಿ ಸಾಲ ಕೇಳಿದ್ದರು. ಹಣ ಕೇಳಿದ ದಿನವೇ ಸಾಲ ಕೊಡಲು ತೊಂದರೆ ಇರಲಿಲ್ಲ. ಆರೋಪಿ ನನ್ನ ಮನೆಯ ಬಳಿಯೇ ಚೆಕ್ ನ್ನು ಕೊಟ್ಟಿರುತ್ತಾರೆ. ಚೆಕ್ ನ್ನು ಕೊಡುವ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೇವು.

ಆರೋಪಿಗೆ ತನ್ನ ಸಹಿಯನ್ನು ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಮಾಡಲು ಬರುತ್ತದೆ ವಿನಹಃ ಬರವಣಿಗೆ ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ಎದುರಿನಲ್ಲಿ ಸಹಿ ಮಾತ್ರ ಬರೆದುಕೊಟ್ಟಿರುತ್ತಾರೆ, ಮತ್ತು ಬರವಣಿಗೆಯನ್ನು ಮೊದಲೇ ಮಾಡಿಸಿ ತಂದಿದ್ದರು ಎನ್ನುತ್ತಾರೆ. ನಿಪಿ-1 ರ ಚೆಕ್ ನ್ನೇ ಆರೋಪಿ ಕೊಟ್ಟಿರುತ್ತಾರೆ. ನಿಪಿ-1 ರ ಬರವಣಿಗೆಯನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಆರೋಪಿ ಚೆಕ್ ನೀಡಿದ ದಿನವೇ ನಾನು ಬ್ಯಾಂಕ್ ಗೆ ಹಾಕಿರುತ್ತೇನೆ. ಆರೋಪಿಗೆ ಪೋನ್ ಕರೆ ಮಾಡಿ ಚೆಕ್ ಅನೂರ್ಜಿತವಾದ ಬಗ್ಗೆ ತಿಳಿಸಲು ಪ್ರಯತ್ನಿಸಿರುತ್ತೇನೆ. ದಿ 29-11-2023 ರಂದು ವಕೀಲರಿಗೆ ನೋಟೀಸ್ ಕೊಡಲು ಹೇಳಿರುತ್ತೇನೆ. ಆರೋಪಿಯು ವಕೀಲರ ನೋಟೀಸ್ ನ್ನು ಪಡೆದಿಲ್ಲ ಎಂದು ನಮ್ಮ ವಕೀಲರು ತಿಳಿಸಿರುತ್ತಾರೆ. ಆರೋಪಿಯ ವಿಳಾಸಕ್ಕೆ ನೋಟೀಸ್ ಕಳುಹಿಸಿರದೇ ಇರುವುದರಿಂದ ನೋಟೀಸ್ ಸ್ವೀಕರಿಸಿಲ್ಲಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಸಿದ್ದೇನೆ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. 3 ತಿಂಗಳ ನಂತರ ಮರುಪಾವತಿ ಮಾಡುತ್ತೇನೆಂದು ಆರೋಪಿ ತಿಳಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಕೀಲರ ಮೂಲಕ ನೋಟೀಸ್ ನ್ನು ಆರೋಪಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಎಪಿಎಲ್ ಕಾರ್ಡ್ ಹೊಂದಿದ್ದೇನೆ. ಆರೋಪಿ ನನ್ನ ಬಳಿ 50 ಸಾವಿರ ಚೀಟಿ ಹಾಕಿದ್ದರು ಎಂದರೆ ಸರಿಯಲ್ಲ. ಚೀಟಿ ಹಣ ಪಡೆದು ಅದರ ಭದ್ರತೆಗಾಗಿ ನಿಪಿ-1 ರ ಚೆಕ್ ನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಚೀಟಿ ಹಣ ಕಟ್ಟಿದ್ದರೂ ಸಹ ಚೆಕ್ ನ್ನು ಕೊಡದೇ ಸತಾಯಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಹಣ ವಸೂಲಿ ಮಾಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ